O.S. NO. 270/2023

DW – 1 .

Dated 22-04-2026.

ಸಾಕ್ಷಿಯನ್ನು ಈ ದಿನ ದಿನಾಂಕ 22-04-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಪಾಟಿ ಸವಾಲುಃ ವಾದಿ ಪರವಾಗಿ ಶ್ರೀ ಸಿ ಎಸ್ ಸಿ ವಕೀಲರಿಂದಃ

ನಾನು ಶಾಲೆ ಕಲಿತಿದ್ದೇನೆ. ನನಗೆ ಓದು ಬರಹ ಬರುತ್ತದೆ. ಈಗ ತೋರಿಸಿದ ಶಾಲಾ ವರ್ಗಾವಣೆ ಪ್ರಮಾಣ ಪತ್ರ ನೀಲಪ್ಪ ನಿಂಗಪ್ಪ ಚಂದರಗಿ ರವರದು ಇದೆ. ಸದರಿಯವರು ನನ್ನ ಅಜ್ಜ ಇರುತ್ತಾರೆ. ಸಾಕ್ಷಿ ಮುಂದುವರೆದು ಸದರಿ ದಾಖಲಾತಿಯಲ್ಲಿ ದೇವಲತ್ತಿ ಗ್ರಾಮ ಅಂತಾ ಇದೆ ನಮ್ಮ ಊರು ಮರಡಿ ನಾಗಲಾಪುರ ಇದ್ದುದರಿಂದ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾಖಲೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ ದೇವಲತ್ತಿ ರವರು ನೀಡಿದ ದಾಖಲೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸದರಿ ದಾಖಲೆ ನೊಡಿ ಗುರುತಿಸಲು ನಿರಾಕರಿಸಿದ್ದರಿಂದ ಅದನ್ನು ಪ್ರತ್ಯೇಕವಾಗಿ ಸಲ್ಲಿಸಲು ಸೂಚಿಸಲಾಗಿದೆ. ನನ್ನ ಅಜ್ಜ ನೀಲಪ್ಪ ದೇವಲತ್ತಿಯ ಶಾಲೆಯಲ್ಲಿ ಕಲಿತಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನೀಲಪ್ಪ ನಿಂಗಪ್ಪ ಚಂದರಗಿ ದೇವಲತ್ತಿ ಗ್ರಾಮದಲ್ಲಿ ವಾಸವಿದ್ದನು ಎಂದರೆ ಸರಿಯಲ್ಲ. ನಿಂಗಪ್ಪನ ಮಗ ನೀಲಪ್ಪ ಮತ್ತು ನೀಲಪ್ಪ ರವರ ತಾಯಿ ಹೆಸರು ತಂಗೆವ್ವ ಎಂದರೆ ನನಗೆ ಮಾಹಿತಿ ಇಲ್ಲ. ನಿಂಗಪ್ಪ ಸದರಿ ತಂಗೆವ್ವಳನ್ನು ಮದುವೆ ಆಗಿದ್ದನು ಎಂದರೆ ಸುಳ್ಳು. ಸದರಿ ನಿಂಗಪ್ಪನ ಹೆಂಡತಿ ತಂಗೆವ್ವ ಅಲ್ಲ ಎನ್ನುವುದು ಹೇಗೆ ಗೊತ್ತಾಯಿತು ಎಂದರೆ

ನನ್ನ ತಂದೆ ನನಗೆ ಎಲ್ಲ ಹೇಳಿದ್ದಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಿಂಗಪ್ಪ ಮತ್ತು ತಂಗೆವ್ವ ಮದುವೆ ಮಾಡಿಕೊಂಡು ಗಂಡ ಹೆಂಡತಿ ಅಂತಾ ಜೀವನ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಂಗಪ್ಪ ತಂಗೆವ್ವಳನ್ನು ಹೊಡದು ಬಡೆದು ಮಾಡಿ ಅವಳನ್ನು ತವರು ಮನೆಗೆ ಕಳುಹಿಸಿದ್ದನು ಎಂದರೆ ಸುಳ್ಳು. ಹೀಗಾಗಿ ತಂಗೆವ್ವ ತನ್ನ ತವರು ಮನೆಯಾದ ದೇವಲತಿಯಲ್ಲಿ ವಾಸವಿದ್ದಳು ಎಂದರೆ ಸರಿಯಲ್ಲ. ನಿಂಗಪ್ಪ ಮತ್ತು ತಂಗೆವ್ವಳ ದಾಂಪತ್ಯ ಜೀವನದಿಂದ ಅವಳಿಗೆ ನೀಲಪ್ಪ ಎಂಬ ಗಂಡು ಮಗ ಜನಿಸಿದನು ಎಂದರೆ ಸರಿಯಲ್ಲ. ನಿಂಗಪ್ಪ ತನ್ನ ಹೆಂಡತಿ ತಂಗೆವ್ವಳನ್ನು ಮತ್ತು ಮಗ ನೀಲಪ್ಪ ನನ್ನು ಮರಡಿ ನಾಗಲಾಪುರಕ್ಕೆ ಯಾವತ್ತು ಕರೆಯಲಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪ ತನ್ನ ಹೆಂಡತಿ ತಂಗೆವ್ವ ಮತು ಮಗ ನೀಲಪ್ಪ ರವರಿಗೆ ಪ್ರತಿ ತಿಂಗಳು ಜೀವನಾಂಶ ಕ್ಕಾಗಿ ಹಣ ಕೊಟ್ಟು ಬರುತ್ತಿದ್ದನು ಎಂದರೆ ಸರಿಯಲ್ಲ. ಸದರಿ ಜೀವನಾಂಶ ಹಣದಲ್ಲಿ ತಂಗೆವ್ವ ತನ್ನ ಮಗನಾದ ನೀಲಪ್ಪನಿಗೆ ಶಿಕ್ಷಣ ಕೊಡೆಸುತ್ತಿದ್ದಳು ಎಂದರೆ ಸರಿಯಲ್ಲ. ನಿಂಗಪ್ಪ ತಂಗೆವ್ವ ಜೀವಂತ ಇರುವಾಗಲೇ ಶಾಂತವ್ವನಳನ್ನು 2 ನೇ ಮದುವೆ ಆದನು ಎಂದರೆ ಸರಿಯಲ್ಲ. ನಿಂಗಪ್ಪನಿಗೆ ಸದರಿ 2 ನೇ ಹೆಂಡತಿಯಿಂದ ಆನಂದ, ರುದ್ದಪ್ಪ ಮತ್ತು ಮಾರುತಿ ಅಂದರೆ ನಾವು 1 ರಿಂದ 3 ನೇ ಪ್ರತಿವಾದಿಗಳು ಎಂದರೆ ಸಾಕ್ಷಿ ನನ್ನ ತಂದೆಗೆ ನನ್ನ ತಾಯಿ ಒಬ್ಬಳೇ ಹೆಂಡತಿ ಇರುತ್ತಾಳೆ ಎಂದು ನುಡಿದಿರುತ್ತಾರೆ. ನಿಂಗಪಪನನ ಕಾನೂನು ಬದ್ದ ಹೆಂಡತಿ ತಂಗೆವ್ವ ಮಾತ್ರ ಇದ್ದು ನನ್ನ ತಾಯಿ ಕಾನೂನು ಬದ್ದ ತಾಯಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನೀಲಪ್ಪ ಹಾಗು ನಾವು 1 ರಿಂದ 3 ನೇ ಪ್ರತಿವಾದಿ ಗಳಿಗೆ ಕಾನುನು ಬದ್ದ ಸಾಮೂಹಿಕ ಹಿಸ್ಸಾ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನೀಲಪ್ಪ ರವರಿಗೆ

ಆಸ್ತಿಗಳಲ್ಲಿ ಹಿಸ್ಸೆ ಕೊಡಬಾರದು ಎಂಬ ದುರುದ್ದೇಶದಿಂದ ನಾವು ಮತ್ತು ನಮ್ಮ ತಂದ ಸೇರಿ ನೀಲಪ್ಪ ಮರಡಿ ನಾಗಲಾಪುರ ಗ್ರಾಮಕ್ಕೆ ಬರಬಾರದ ಹಾಗೇ ಮಾಡಿದ್ದೇವು ಎಂದರೆ ಸರಿಯಲ್ಲ.

ನಿಂಗಪ್ಪ ಬೇದಿ ಆಗಿ ಮೃತಪಟ್ಟಿರುತ್ತಾನೆ. ಆತನನ್ನು ಆಸ್ಪತ್ರೆ ಗೆ ತೋರಿಸಿದ್ದೇವು. ಯಾವ ಆಸ್ಪತ್ರೆ ಎಂದರೆ ಹಿರೇ ಬಾಗೇವಾಡಿ ಸರ್ಕಾರಿ ಆಸ್ಪತ್ರೆ ಮತ್ತು ತಿಗಡಿಯ ಸರ್ಕಾರಿ ಆಸ್ಪತ್ರೆ ಯಲ್ಲಿ ತೋರಿಸಿದ್ದೇವು. ಎಷ್ಟು ದಿನ ಆಸ್ಪತ್ರೆ ಗೆ ತೋರಿಸಿದ್ದೀರಾ ಎಂದರೆ ಅವರು ಬೇದಿ ಆಗಿ 15 ದಿನದಲ್ಲೆ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಿಂಗಪ್ಪನ್ನು ಆಸ್ಪತ್ರೆ ಗೆ ತೋರಿಸಿದ ಬಗ್ಗೆ ವೈದ್ಯಕೀಯ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಮಾಡಿಲ್ಲ, ಮಾಡುತ್ತೇನೆ. ನಿಂಗಪ್ಪ ಮೃತಪಟ್ಟಾಗಿ ಆತನ ವಯಸ್ಸು 87 ವರ್ಷ ಇತ್ತು. ನಿಂಗಪ್ಪ ತನ್ನ ಮರಣ ಪೂರ್ಣ 5 ವರ್ಷ ಗಳಿಂದ ಬಿಪಿ, ಶುಗರ ಕಾಯಿಲೆಗಳಾಗಿ ಬಳಲಿ ಹಾಸಿಗೆ ಹಿಡಿದಿದ್ದನು ಎಂದರೆ ಸರಿಯಲ್ಲ. ಆತ ಸುಮಾರು ಸದರಿ 5 ವರ್ಷಗಳಿಂದ ಬಿಪಿ ಮತ್ತು ಶುಗರ ಕಾಯಿಲೆ ಆದ್ದುದರಿಂದ ಮಾತ್ರೆಗಳನ್ನು ಪಡೆಯುತ್ತಿದ್ದನು ಎಂದರೆ ಸರಿಯಲ್ಲ. ನಿಂಗಪ್ಪ ಬಕ್ಷಿಸ ಪತ್ರ ಮಾಡಲು ಕಾರಣ ಏನು ಇತ್ತು ಎಂದರೆ ನಾವು 3 ಜನ ಚೆನ್ನಾಗಿ ಬದುಕಿ ಅಂತಾ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಬಕ್ಷಿಸ ಪತ್ರ ನಾನು ಓದಿರುವುದಿಲ್ಲ. ಬಕ್ಷಿಸ ಪತ್ರದಲ್ಲಿ ಅವರಿಗೆ ವಯಸ್ಸಾದ್ದರಿಂದ ಬಕ್ಷಿಸ ಪತ್ರ ಮಾಡುತ್ತಿದ್ದೇನೆ ಎಂದು ಬರೆದ್ದಿದ್ದಾರೆ ಎಂದರೆ ನನಗೆ ಗೊತ್ತಿಲ. ನಿಂಗಪ್ಪನ ಜೀವಿತ ಅವದಿಯಲ್ಲಿ ಯಾವುದೇ ವಾಟ್ನಿ ವಗೈರೆ ಆಗಿರುವುದಿಲ್ಲ.

ಬಕ್ಷಿಸ ಪತ್ರ ಆದ ನಂತರ ನಿಂಗಪ್ಪ 1 ವಾರ – 15 ದಿನ ಗಳಲ್ಲಿ ಮೃತಪಟ್ಟಿರುತ್ತಾನೆ. ಬಕ್ಷಿಸ ಪತ್ರ ಮಾಡುವ ಮಾನಸಿಕ ಆರ್ೋಗ್ಯ ಮತ್ತು ಸ್ಥಿತಿ ನಿಂಗಪ್ಪರವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಿಂಗಪ್ಪ ತನಗೆ ಹೆಚ್ಚು ವಯಸ್ಸು ಆಗಿದ್ದರಿಂದ ಬಡಿಗೆ ಸಹಾಯದಿಂದ ನಡೆಯುತ್ತಿದ್ದನು ಎಂದರೆ ಸರಿಯಲ್ಲ. ಈಗ ತೋರಿಸಿದ ನಿಪಿ – 6 ರಲ್ಲಿ ನಿಂಗಪ್ಪನ ಬಾವಚಿತ್ರ ಇದ್ದು ಆತ ಬಡಿಗೆ ಹಿಡಿದು ಕೊಂಡಿರುವುದು ಕಾಣುತ್ತದೆ ಎಂದರೆ ಸರಿಯಲ್ಲ. ನಿಪಿ – 6 ನಿಂಗಪ್ಪ ಮನೆಯಲ್ಲಿ ಇದ್ದಾಗ ಆತನ ಪೂಟೊ ಪಡೆದು ಸಬ ರಜಿಸ್ಟರ ಕಚೆರಿಯಲ್ಲಿ ತಯಾರಿಸಿಲಾಗಿದೆ ಎಂದರೆ ಸರಿಯಲ್ಲ. ನಿಂಗಪ್ಪ ಬಕ್ಷಿಸ ಪತ್ರ ವನ್ನು 2023 ರಲ್ಲಿ ಮಾಡಿರುತ್ತಾರೆ. ತಾರೀಖು , ತಿಂಗಳು ಈಗ ನನಗೆ ನೆನಪಿಲ್ಲ. ಬಕ್ಷಿಸ ಪತ್ರ ಮಾಡಲು ಮಾಹಿತಿ ಯಾರು ಕೊಟ್ಟರು ಎಂದರೆ ನನಗೆ ತಂದೆ ಯವರು ಬಕ್ಷಿಸ ಪತ್ರ ಮಾಡಿರುತ್ತಾರೆ ಅವರಿಗೆ ಗೊತ್ತಿತ್ತು ಎಂದು ನುಡಿದಿರುತ್ತಾರೆ. ನಿಂಗಪ್ಪನ ಜೀವಿತ ಅವದಿಯಲ್ಲಿ ನಿಲಪ್ಪನ ನ್ನು ಸೇರಿಸಿಕೊಂಡು 4 ಹಿಸ್ಸೆ ಮಾಡಿಕೊಡುತ್ತೇವೆ ಎಂದು ಮೊಸ ಮಾಡಿ ದಾಖಲಾತಿಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಒಟ್ಟು 3 ದಾಖಲೆಗಳ ನೊಂದಣಿ ಆಗಿರುತ್ತವೆ. ಮೃತ್ಯು ಪತ್ರ ಬರೆದಾಗ ನಾನು ಸಹ ಸಮಕ್ಷಮ ಹಾಜರಿದ್ದೇನು. ಹೀಗಾಗಿ ನನಗೆ ಮೃತ್ಯು ಪತ್ರ ದಲ್ಲಿ ಬರೆದ ಎಲ್ಲ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ನನಗೆ ಗೊತಿತಲ್ಲ ನನ್ನ ತಂದೆ ಯವರಿಗೆ ಗೊತ್ತು ಎಂದು ನುಡಿದಿರುತ್ತಾರೆ. ಮೃತ್ಯು ಪತ್ರ ತಯಾರಿಸಿದ ನಂತರ ನನ್ನ ತಂದೆಯವರಿಗೆ ಕೊಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ಮೃತ್ಯು ಪತ್ರ ಮನೆಯಲ್ಲಿ ಇದ್ದ ಟ್ರಂಕನಲ್ಲಿ ಇದ್ದಿರುವುದನ್ನು ನೊಡಿರುತ್ತೇನೆ. ಮೃತ್ಯು ಪತ್ರ ಮಾಡುತ್ತಿದ್ದೇನೆ ಅಂತಾ ನಮಗೆ ನನ್ನ ತಂದೆ

ಎಲ್ಲ ತಿಳಿಸಿದ್ದರು. ಮೃತ್ಯು ಪತ್ರಕ್ಕೆ ಕೆಂಚಪ್ಪ ಹುಣಶಿಕಟ್ಟಿ ಮತ್ತು ಹೊಳೆಹೊಸುರ ಗ್ರಾಮದವರು ಒಬ್ಬರು ಇರುತ್ತಾರೆ. ಮೃತ್ಯು ಪತ್ರ ಮತ್ತು ಬಕ್ಷಿಸ ಪತ್ರಗಳಿಗೆ ಇರುವಂತಹ ಸಾಕ್ಷಿದಾರರು ಎಲ್ಲರು ಒಂದೇ ಇರುತ್ತಾರೆ ಎಂದರೆ ಸರಿ. ಬಕ್ಷಿಸ ಪತ್ರ ದಲ್ಲಿ ನನ್ನ ತಂದೆ ನಾನು ಅನಾರೋಗ್ಯದಿಂದ ಬಳಲುತ್ತಿದ್ದೆನೆ ಯಾವ ಕಾಲದಲ್ಲಿ ಏನು ಆಗುತ್ತದೆ ಎಂದು ಹೇಳಿ ಬರೆಸಿರುತ್ತಾರಾ ಎಂದರೆ ಬರೆಸಿರುತ್ತಾರೆ. ಮೃತ್ಯು ಪತ್ರದ ಪ್ರೊಬೆಟ ನಾನು ಪಡೆದಿಲ್ಲ. ಮೃತ್ಯು ಪತ್ರದ ಪ್ರಕಾರ ನಾವು 3 ಜನ ಅಣ್ಣ ತಮ್ಮಂದಿರು ಆಸ್ತಿಗಳ ಕಬ್ಜಾ ಪಡೆದಿರುತ್ತೇವೆ. ಮೃತ್ಯು ಪತ್ರದಲ್ಲಿ ಸರ್ವೆ ನಂ. 150/3 ಕ್ಷೇತ್ರ 3 ಎಕರೆ 3 ಗುಂಟೆ ಬಗ್ಗೆ ಬರೆದಿರುತ್ತಾರೆ. ನನ್ನ ತಂದೆ ಸಾಯುವ ಸಮಯದಲ್ಲಿ ನಮಗೆ ಅನುಕೂಲ ಆಗುವ ರೀತಿಯಲ್ಲಿ ಮೃತ್ಯು ಪತ್ರ ಮತ್ತು ಬಕ್ಷಿಸಪತ್ರಗಳನ್ನು ನಾವೇ ಸ್ವತ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಿಲಪ್ಪ ಮತ್ತು ನಾವು 1 ರಿಂದ 3 ನೇ ಪ್ರತಿವಾದಿಗಳಿಗೆ ತಲಾ ¼ ಹಿಸ್ಸಾ ಹಕ್ಕು ಇದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಮಕ್ಕಳು ವಾದಿ ಮತ್ತು 5 ನೇ ನೇ ಪ್ರತಿವಾದಿ ಇರುತ್ತಾರೆ ಎಂದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳಲ್ಲಿ ನಿಲಪ್ಪನ ಹಿಸ್ಸೆ ಹಕ್ಕು ಕೊಡಬೇಕಾಗುತ್ತದೆ ಅಂತಾ ಆತ ಯಾರು ಅಂತಾ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಗಳಲ್ಲಿ ನೀಲಪ್ಪನ ಹಿಸ್ಸೆ ಕೊಡಬಾರದು ಅಂತಾ 2 ಬಕ್ಷಿಸ ಪತ್ರ ಮತ್ತು ಒಂದ ಮೃತ್ಯು ಪತ್ರ ಖೊಟ್ಟೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ರೀತಿ ಕಾಗದಗಳನ್ನು ಸೃಷ್ಟಿ ಮಾಡಿ ಆತನ್ನು ಸಾಮೂಹಿಕ ಕಬ್ಜಾ ವಹಿವಾಟದಿಂದ ಹೊರಗೆ ಹಾಕಬೇಕು ಎಂದು ಮಾಡಿರುತ್ತೇವೆ ಎಂದರೆ

O.S. NO. 270/2023

DW – 1 .

Dated 22–04–2026.

ಸರಿಯಲ್ಲ. ನಿಲಪ್ಪನ ¼ ಹಿಸ್ಸೆಯಲ್ಲಿ ವಾದಿಯದು ಕಾನೂನು ಬದ್ದ ಹಿಸ್ಸಾ ಹಕ್ಕು ಇದೆ ಎಂದರೆ ಸುಳ್ಳು. ನಿಂಗಪ್ಪ ತಂಗೆವ್ವಳನ್ನು ಕಾನೂನು ಬ್ದದ ವಾಗಿ ಮದುವೆ ಮಾಡಿಕೊಂಡ ವಿಷಯ ನನಗೆ ಗೊತ್ತಿದ್ದರು ಸಹ ಆಸ್ತಿಯಲ್ಲಿ ನಿಲಪ್ಪನಿಗೆ ಆಸ್ತಿ ಕೊಡಬಾರದು ಅಂತಾ ನನ್ನ ತಾಯಿ ಒಬ್ಬಳೇ ನಿಂಗಪ್ಪನ ಕಾನೂನು ಬದ್ದ ಹೆಂಡತಿ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು 1 ರಿಂದ 3 ನೇ ಪ್ರತಿವಾದಿ ಗಳು ಆಸ್ತಿಗಳಲ್ಲಿ ಪಾಲು ವಿಬಾಗ ಮಾಡಿಕೊಂಡಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ನಿಲಪ್ಪನ ಕಾನೂನು ಬದ್ದ ಹಿಸ್ಸಾ ಹಕ್ಕು ಇದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 4 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಯಾರು ಹಾಜರಾಗದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ – ಇಲ್ಲ .

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ